ಶ್ರೀ ಸಿಂಧೂರ ಜಿ ರಾಜಶೇಖರ್ ಕೆಲವು ಕಾಮಗಾರಿಗಳು ಇನ್ನೂ ಪ್ರಗತಿಪಥದಲ್ಲಿದ್ದರೂ ಸಹ ಕಾಮಗಾರಿ ಮುಗಿದಿದೆಯೆಂದು ಕೊಟ್ಟಿದ್ದಾರೆ ಉದಾಹರಣೆಗೆ ಸವಣೂರಿನ ಪಿ ಡಬ್ಲ್ಯು ಡಿ ಉಪ ವಿಭಾಗದ ಕಚೇರಿ ಕೆಲಸ ಇನ್ನು ನಡೆಯುತ್ತಿದೆ ಅದು ಇನ್ನೂ ಮುಗಿದಿಲ್ಲ, ಅದರೊಂದಿಗೆ ನಾನು ಈ ಸೇತುವೆ ಬಗ್ಗೆ ಕೇಳಿದ್ದೆ ಅದಕ್ಕೆ ಎಷ್ಟು ಚೆನ್ನಾಗಿ ಉತ್ತರ ಕೊಟ್ಟಿದ್ದಾರೆ ನೋಡಿ ಅಧ್ಯಕ್ಷರೆ, "ಕಾರವಾರ ಇಳಕಲ್ ರಾಜ್ಯ ಹೆದ್ದಾರಿಯ 90 ರ ಕಿ ಮೀ 180–50 ರಲ್ಲಿ 90 ಡಿಗ್ರಿ ತಿರುವಿನಲ್ಲಿ ಒಂದು ಹಳೆಯ ಸೇತುವೆಯಿದ್ದು ಸೇತುವೆಯ ಅಗಲ ಕಡಿಮೆಯಿರುವುದರಿಂದ ವಾಹನಗಳು ಅಪಘಾತವಾಗದಂತೆ ಅಗಲವಾದ ಸೇತುವೆಯನ್ನು ನಿರ್ಮಾಣ ಮಾಡಲು ಪರಿಶೀಲನೆಯಲ್ಲಿದೆ`` ಈ ಸೇತುವೆ ಕಿರಿದಾಗಿದ್ದು ತಿರುವಿನಲ್ಲಿರುವುದರಿಂದ ಆ ವಾಹನಗಳು ಸೀದಾ ನಮ್ಮ ಮೋತಿ ತಾಲ್ಲೂಕು ಕೆರೆಗೆ ಬೀಳುವ ಸಂಭವ ಬಹಳ ಇವೆ ಸಾಕಷ್ಟು ಅಪಘಾತಗಳು ಆಗಿವೆ, ಅದಕ್ಕೆ ಅದನ್ನು ಪರಿಶೀಲನೆಗಿಂತ ಆ ಕಾರ್ಯವನ್ನು ಮಾಡುವುದು ಬಹಳ ಅವಶ್ಯಕತೆಯಿದೆ ಎಂದು ತಮ್ಮ ಮೂಲಕ ಅವರನ್ನು ಕೇಳಬಯಸುತ್ತೇನೆ

ಶ್ರೀ ಹೆಚ್ ಡಿ ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) ಮಾನ್ಯ ಸದಸ್ಯರು ಕೇಳಿದ್ದಾರೆ ಈ ಸಾರಿ ಅದನ್ನು ಪರಿಶೀಲನೆ ಮಾಡುತ್ತೇವೆ

ಬ್ರಹ್ಮಾವರದಲ್ಲಿನ ಸರ್ಕಾರಿ ಕಾರ್ಖಾನೆಯಿಂದ ರೈತರಿಗೆ ಬಾಕಿ ಇರುವ ಬಗ್ಗೆ

164(405) ಶ್ರೀ ಗೋಪಾಲ ಪೂಜಾರಿ ಕೆ (ಬೈಂದೂರು) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ, ಬ್ರಹ್ಮಾವರದಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಯಿಂದ ಸ್ಥಳೀಯ ಕಬ್ಬು ಬೆಳೆಗಾರರಿಗೆ ಎಷ್ಟು ಮೊತ್ತ ಪಾವತಿಗೆ ಬಾಕಿ ಇದೆ, ರೈತರಿಗೆ ಹಣ ಪಾವತಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಬ್ರಹ್ಮಾವರ ಸಹಕಾರ ಸಕ್ಕರೆ ಕಾರ್ಖಾನೆಗೆ ರೈತರು ಕಬ್ಬು ಸರಬರಾಜು ಮಾಡಿದ ಕಬ್ಬಿನ ಬಿಲ್ ಬಾಕಿ ರೂ 312 00 ಲಕ್ಷ ಇರುತ್ತದೆ ಈ ಕಾರ್ಖಾನೆಯನ್ನು ಸರ್ಕಾರದ ಆದೇಶ ಸಂಖ್ಯೆ ಸಇ 103 ಸಸಕಾ 2006, ದಿನಾಂಕ 27–11–2006ರನ್ವಯ ಗುತ್ತಿಗೆ ಆಧಾರದ ಮೇಲೆ ನೀಡಲು ಆದೇಶವಾಗಿರುತ್ತದೆ ಗುತ್ತಿಗೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಗುತ್ತಿಗೆ

P2
10

ಹಣದಿಂದ ಬರುವ ಮೊಬಲಗನ್ನು ರೈತರ ಬಾಕಿ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು

ಶ್ರೀ ಕೆ ಗೋಪಾಲ್ ಪೂಜಾರಿ ಬ್ರಹ್ಮಾವರ ಸಹಕಾರ ಸಕ್ಕರೆ ಕಾರ್ಖಾನೆಗೆ ರೈತರು ಕಬ್ಬು ಸರಬರಾಜು ಮಾಡಿದ ಕಬ್ಬಿನ ಬಿಲ್‌ನ ಬಾಕಿ ಹಣ 312 00 ಲಕ್ಷ ರೂಗಳೆಂದು ಹೇಳಿದ್ದಾರೆ ಸಕ್ಕರೆ ಕಾರ್ಖಾನೆ ಖಾಸಗಿಯವರ ಹಸ್ತಾಂತರವಾಗುತ್ತದೆಂದು ಹೇಳಿದ್ದಾರೆ ಇದನ್ನು ಎಷ್ಟು ದಿವಸದಲ್ಲಿ ಈ ರೈತರಿಗೆ ಹಣವನ್ನು ಕೊಡುವಿರಿ? ಎರಡನೆಯದಾಗಿ ಡಿ ಸಿ ಸಿ ಬ್ಯಾಂಕಿಗೆ ಕಾರ್ಖಾನೆಯಿಂದ ಎಷ್ಟು ಹಣ ಬಾಕಿ ಇದೆ ಮೂರನೆಯದಾಗಿ ವ್ಯವಸಾಯ ಸಹಕಾರ ಬ್ಯಾಂಕಿಗೆ ಸಕ್ಕರೆ ಕಾರ್ಖಾನೆಯಿಂದ ಎಷ್ಟು ಹಣ ಬಾಕಿ ಇದೆ ಈ ಎಲ್ಲಾ ಹಣವನ್ನು ಎಷ್ಟು ದಿನಗಳಲ್ಲಿ ಪಾವತಿ ಮಾಡುತ್ತೀರಿ? ಮತ್ತೆ ಈ ಕಾರ್ಖಾನೆ ಎಷ್ಟು ಹಣಕ್ಕೆ ಖಾಸಗಿಯವರಿಗೆ ಹಸ್ತಾಂತರ ಆಗಿದೆ ಮತ್ತೆ ಎಷ್ಟು ವರ್ಷಕ್ಕೆ ಆಗಿದೆ, ಇದು ಯಾವ ಆಧಾರದ ಮೇಲೆ ಆಗಿದೆ ಈ ಬಗ್ಗೆ ಮಾಹಿತಿಯನ್ನು ಕೊಡಬೇಕು

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) ಈ ಕಾರ್ಖಾನೆ ನಾವು ಲೀಸ್‌ಗೆ ಟೆಂಡರ್ ಕರೆದು ಕೊಡತಕ್ಕಂಥ ಸಂದರ್ಭದಲ್ಲಿ ಒಬ್ಬರು ಮಾತ್ರ ಒಪ್ಪಿಕೊಂಡಿದ್ದಾರೆ ಅದರಂತೆ ಅವರಿಗೆ 31 68 ಲಕ್ಷ ರೂಗಳಿಗೆ ಕೊಡಲಿಕ್ಕೆ ಅಂತಿಮ ನಿರ್ಣಯವನ್ನು ಕೈಗೊಂಡಿದೆ ಇದಕ್ಕೆ ನಾವು ಈಗ ಬರತಕ್ಕಂಥ ಹಣದಲ್ಲಿ ರೈತರಿಗೆ ಕೊಡತಕ್ಕಂಥ ಬಾಕಿಯನ್ನು ಚುಕ್ತಾ ಮಾಡಲಾಗುತ್ತದೆ ಹಾಗೂ ತಾವು ಕೇಳುತ್ತಿರುವ ಡಿ ಸಿ ಸಿ ಬ್ಯಾಂಕ್ ಮತ್ತು ವ್ಯವಸಾಯ ಸಹಕಾರ ಸಂಘಗಳಿಗೆ ಕೊಡತಕ್ಕಂಥ ಮಾಹಿತಿಯನ್ನು ಮಾನ್ಯ ತಮಗೆ ಒದಗಿಸುತ್ತೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ರೈತರಿಗೆ, ಕಾರ್ಮಿಕರಿಗೆ ಒಟ್ಟು ಸಹಕಾರ ಸಂಘಗಳಿಗೆ 14 00 ಕೋಟಿ ರೂಗಳು ಬಾಕಿ ಇದೆ ನೀವು ಬಿಡ್ ಕರೆದಿರುವುದರಲ್ಲಿ ಏನು terms ಹಾಕಿದ್ದೀರಿ 50 00 ಲಕ್ಷ ರೂಗಳ ಬಿಡ್ ಅಕ್ಸೆಪ್ಟ್ ಆದಕೂಡಲೇ 1 00 ಕೋಟಿ ರೂಗಳನ್ನು EMD ಕಟ್ಟಿದ್ದಾರೆ, ಮತ್ತೆ ಇವರಿಗೆ 5 ವರ್ಷಗಳ ಕಾಲ ರಜೆ ಇದೆ ಆಮೇಲೆ ವರ್ಷೇ ವರ್ಷೇ ಒಂದು ಕೋಟಿ ರೂಪಾಯಿಗಳನ್ನು ಕಟ್ಟಿಕೊಂಡು ಬರುವುದು ಅದರಲ್ಲಿ ನೀವು ರೈತರಿಗೆ, ಕಾರ್ಮಿಕರಿಗೆ, ಸಹಕಾರ ಸಂಘಗಳಿಗೆ ಯಾವಾಗ ಹಣ ಕೊಡುತ್ತೀರಿ ನಿಮ್ಮ ಸಂಸ್ಥೆಗಳು ಈಗ ಮುಳುಗಿಹೋಗುತ್ತವೆ ಅದಕ್ಕೋಸ್ಕರ ಸರ್ಕಾರ

ಮೊದಲು ದುಡ್ಡು ಕೊಟ್ಟು ನೀವು ಈ ದುಡ್ಡನ್ನು adjust ಮಾಡಿಕೊಂಡರೆ ಆಗುತ್ತದೆ ಒಂದು ವೇಳೆ ನೀವು ಅವರು ಕಟ್ಟಿದ ದುಡ್ಡಿನಲ್ಲಿ ವಾಪಸ್ಸು ಕೊಡುತ್ತೇವೆಂದರೆ ಖಂಡಿತ ಕಾರ್ಮಿಕರು, ರೈತರು ಅವರ್ಯಾರು ಬದುಕಿರುವುದಿಲ್ಲ ಆ ಪರಿಸ್ಥಿತಿಯೂ ನಿರ್ಮಾಣವಾಗಬಹುದು, ಅವರಿಗೆ ಇವತ್ತು ಊಟಕ್ಕೆ ಹಣವಿಲ್ಲ ಅದಕ್ಕೋಸ್ಕರ ಸರ್ಕಾರ ತಕ್ಷಣ ಅವರ ಸಹಾಯಕ್ಕೆ ಬಂದು ಸಹಕಾರಿ ಸಂಘಗಳಿಗೆ, ರೈತರಿಗೆ, ಕಾರ್ಮಿಕರಿಗೆ ಅವರ ಹಣವನ್ನು ಕೊಡಬೇಕು

ಸಹಕಾರಿ ಸಂಘಕ್ಕೆ, ಕಾರ್ಮಿಕರಿಗೆ, ರೈತರಿಗೆ ಕೊಟ್ಟಮೇಲೆ ಇನ್ನೊಂದು ಮಾಡಬಹುದು ಯಾವಾಗ ಸಾಲದ ಬಡ್ಡಿ ಮನ್ನಾ ಮಾಡಿದಿರಲ್ಲ, ಈ ರೈತರು ಸಕ್ಕರೆ ಕಾರ್ಖಾನೆಗೆ ಸಹಿ ಹಾಕಿದ ಮೇಲೆ, guarantee ಕೊಟ್ಟಮೇಲೆ ಬ್ಯಾಂಕ್‌ನವರು ಸಾಲವನ್ನು ಕೊಟ್ಟಿದ್ದು ಆ ಬಡ್ಡಿಯ ಮನ್ನಾ ಏಕೆ ಮಾಡಲಿಲ್ಲವೆಂದು ಕೇಳುತ್ತಿದ್ದೇನೆ

ಶ್ರೀ ಜಿ ಟಿ ದೇವೇಗೌಡ ಬಡ್ಡಿ ಮನ್ನಾ ಮಾಡದೇ ಇರುವ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ ಅದರ ಬಗ್ಗೆ ಮಾಹಿತಿಯನ್ನು ತರಿಸಿ ಉತ್ತರವನ್ನು ಕೊಡುತ್ತೇನೆ ಮಾನ್ಯ ಸದಸ್ಯರು ಏನು ಕೊಡಬೇಕೆಂದು ಕೇಳುತ್ತಿದ್ದಾರೆ ಅದರ ಬಗ್ಗೆ ಟೆಂಡರ್‌ದಾರರನ್ನು ಕರೆದು ರೈತರಿಗೆ ಕೊಡತಕ್ಕ ಬಾಕಿ ಹಣವನ್ನು ಮತ್ತು ನೌಕರರಿಗೆ ಕೊಡತಕ್ಕ ಸಂಬಳದ ಹಣವನ್ನು ತೀರಿಸಬೇಕೆಂದು condition ಹಾಕಿದ್ದೇವೆ ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ ಅದನ್ನು ಮಾಡುವುದಕ್ಕೆ ತುರ್ತುಕ್ರಮವನ್ನು ಕೈಗೊಳ್ಳುತ್ತೇವೆ

ಶ್ರೀ ಕೆ ಗೋಪಾಲ್ ಪೂಜಾರಿ ಆ ರೀತಿ ಹೇಳುವುದಕ್ಕಾಗುವುದಿಲ್ಲ ರೈತರು, ಕಾರ್ಮಿಕರು ಸತ್ತುಹೋಗಿದ್ದಾರೆ ಆ ಹಂತ ಮುಟ್ಟಿದೆ ನೀವು timeನ್ನು ಹೇಳಬೇಕು Time ಹೇಳದಿದ್ದರೆ ಆಗುವುದಿಲ್ಲ Time ಹೇಳಿ

ಶ್ರೀ ಜಿ ಟಿ ದೇವೇಗೌಡ ನಮಗೆ ರೈತರ ಬಗ್ಗೆ ಕಾರ್ಮಿಕರ ಬಗ್ಗೆ ಕಾಳಜಿ ಇದೆ ಆದಷ್ಟು ಬೇಗ ಅವರನ್ನು ಕರೆದು ತುರ್ತಾಗಿ ಇದನ್ನು ಬಗೆಹರಿಸಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ Bid accept ಆಗುವಾಗಲೇ ಯಾರು tender ತೆಗೆದುಕೊಳ್ಳುತ್ತಾರೆ ಅವರಿಂದ ಹಣವನ್ನು ಕೊಡಿಸಿ, ಇಲ್ಲದಿದ್ದರೆ 5 ವರ್ಷದ ನಂತರ ಕೊಡುವುದೆಂದರೆ ಬಹಳ ಕಷ್ಟವಾಗುತ್ತದೆ ಅವರಿಗೆ ಯಾವಾಗ

hand over ಮಾಡುತ್ತೀರೋ ಆ ತಕ್ಷಣ ಇವರಿಗೆ ಹಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಬೇಕು

ಶ್ರೀ ಜಿ ಟಿ ದೇವೇಗೌಡ ಸಕ್ಕರೆ ಕಾರ್ಖಾನೆಗಳಿಗೆ ಟೆಂಡರ್ ಹಾಕತಕ್ಕವರು ಬಹಳ ಕಡಿಮೆಯಾಗಿದೆ ಕೇವಲ ಒಬ್ಬೊಬ್ಬರು ಟೆಂಡರ್ ಹಾಕುತ್ತಿದ್ದಾರೆ Single tenderಗಳು ಆಗುತ್ತಿದೆ ಯಾರು ಕೂಡ ಬರುತ್ತಿಲ್ಲ ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ನಾವು ಅವರನ್ನು ಕರೆದು ಇದನ್ನು ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳುತ್ತೇವೆ

ಆಳಂದ ಸಕ್ಕರೆ ಕಾರ್ಖಾನೆ

165(1088) ಶ್ರೀ ಪಾಟೀಲ್ ಬಿ ಆರ್ (ಆಳಂದ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ಸಕ್ಕರೆ ಕಾರ್ಖಾನೆ ಖಾಸಗಿಯವರಿಗೆ ಲೀಸ್ ಕೊಡುವಾಗ ಎಷ್ಟು ಜನ ಆಸಕ್ತಿ ವಹಿಸಿ ಅರ್ಜಿ ಹಾಕಿದ್ದರು,

ಆ) ಲೀಸ್ ಹೋಲ್ಡರ್‌ಗೆ ಯಾವ ಯಾವ ಷರತ್ತುಗಳನ್ನು ಹಾಕಲಾಗಿದೆ ಹಾಗೂ ಎಷ್ಟು ಹಣಕ್ಕೆ ಲೀಸ್ ಕೊಡಲಾಗಿದೆ (ವಿವರ ಒದಗಿಸುವುದು)?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)

ಅ) ಆಳಂದ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಗುತ್ತಿಗೆಗೆ ಕೊಡುವಾಗ ಒಬ್ಬರು ಮಾತ್ರ ಅಂದರೆ ಶ್ರೀ ರೇಣುಕಾ ಶುಗರ್ಸ್ ಬೆಳಗಾಂ ಇವರು ಟೆಂಡರ್ ಅರ್ಜಿ ಹಾಕಿದ್ದರು

ಆ) ಗುತ್ತಿಗೆದಾರರಿಗೆ ಈ ಕೆಳಕಂಡ ಪ್ರಮುಖ ಷರತ್ತುಗಳನ್ನು ವಿಧಿಸಲಾಗಿದೆ

1) ಗುತ್ತಿಗೆ ಅವಧಿಯು 2005–06 ರಿಂದ 2011–12ರವರೆಗೆ 7 ವರ್ಷಗಳಿಗೆ ಸೀಮಿತವಾಗಿದೆ

2) ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಕಾರ್ಖಾನೆಯ ಕಾರ್ಯ ವ್ಯಾಪ್ತಿಯಲ್ಲಿ ಲಭ್ಯವಿರುವ ಕಬ್ಬನ್ನು ನುರಿಸಬೇಕು

3) ಕೇಂದ್ರ ಸರ್ಕಾರ ನಿಗದಿಪಡಿಸಿರುವಂತೆ ಶಾಸನಬದ್ಧ ಕನಿಷ್ಟ ದರಕ್ಕಿಂತ ಕಡಿಮೆ ಇಲ್ಲದಂತೆ ಕಬ್ಬಿನ ದರ ಪಾವತಿಸುವುದು

4) ಹಾಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ನೌಕರ ಹಾಗೂ ಕಾರ್ಮಿಕರನ್ನು ಸಾಧ್ಯವಾದ ಮಟ್ಟಿಗೆ ಕೆಲಸದ ಮೇಲೆ ತೆಗೆದುಕೊಳ್ಳುವುದು ಮತ್ತು